[Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

**IN THE COURT OF CIVIL JUDGE & J.M.F.C., KARKALA.**

**Criminal Case No. 400/2017**

**..................................................Vs....................................**

**ಪಿ.ಡಬ್ಲ್ಯು : 11 ಸಿ.ಡಬ್ಲ್ಯು : 14**

ಸಾಕ್ಷಿದಾರನ ಹೆಸರು : ಸತೀಶ್ ಬಟ್ವಾಡಿ

ತಂದೆಯ ಹೆಸರು : ಶೇಷಯ್ಯ

ಪ್ರಾಯ : 41 ವರ್ಷ

ಉದ್ಯೋಗ : ಸಹಾಯಕ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ

ವಾಸ : ಬೆಂಗಳೂರು

ದಿನಾಂಕ 09.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ನಾನು 2016 ರಿಂದ 2021 ರವರೆಗೆ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೇದೆ ಮತ್ತು ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಸಾಕ್ಷಿಯು ಆರೋಪಿಯನ್ನು ವಿಸಿ ಮುಖಾಂತರ ನೋಡಿ ಗುರುತಿಸಿರುತ್ತಾರೆ.

2. ದಿಃ10.12.2016 ರಂದು ಚಾಸಾ-19 ರವರು ಅಪರಾಧ ಕ್ರಮಾಂಕ 219/2016 ಕಲಂ 457 ಮತ್ತು 511 ಐಪಿಸಿ ಪ್ರಕರಣದಲ್ಲಿ ಸಂಶಿಯಿತ ಆರೋಪಿ ಉಮಾನಾಥ ಪ್ರಭು ರವರನ್ನು ಬಂಧಿಸಿ ಕರೆದುಕೊಂಡು ಬರುವಂತೆ ಮೌಖಿಕ ಆದೇಶವನ್ನು ನೀಡಿ ತನ್ನ ಮುಂದೆ ಹಾಜರುಪಡಿಸುವಂತೆ ವಿಶೇಷ ಕರ್ತವ್ಯಕ್ಕೆ ಚಾಸಾ-13 ಮತ್ತು ನನ್ನನ್ನು ನೇಮಿಸಿರುತ್ತಾರೆ. ಅದೇ ದಿನ ಕಾರ್ಕಳದಿಂದ ಹೊರಟು ಉಪ್ಪಿನಂಗಡಿ, ಮೂಡಬಿದ್ರೆ ಪರಿಸರದಲ್ಲಿ ಸಂಚರಿಸಿ ಬಾತ್ಮಿದಾರರಿಂದ ಮತ್ತು ಸ್ಥಳೀಯವರಿಂದ ಆರೋಪಿಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ್ದು ಆತನ ಬಗ್ಗೆ ಯಾವುದೇ ಪೂರಕ ಮಾಹಿತಿ ದೊರಕಿರುವುದಿಲ್ಲ. ನಂತರ ಮುಂಡ್ಕೂರು ಪರಿಸರದಲ್ಲಿ ಓರ್ವ ಅಪರಿಚಿತ ವ್ಯಕ್ತಿ ಇರುವುದಗಿ ದೊರೆತ

ಮಾಹಿತಿಯಂತೆ ಮೂಡಬಿದ್ರೆಯಿಂದ ಹೊರಟು ಮುಂಡ್ಕೂರಿಗೆ ತೆರಳಿ ರಾತ್ರಿ ಮುಂಡ್ಕೂರು ಪರಿಸರದಲ್ಲಿ ಗುಪ್ತವಾಗಿ ಸಂಚರಿಸಿಕೊಂಡಿರುತ್ತೇವೆ. ದಿಃ11.12.2016 ರಂದು ದೊರೆತ ಖಚಿತ ಮಾಹಿತಿಯಂತೆ ಬೆಳಿಗ್ಗೆ 7.00 ಗಂಟೆಗೆ ಮುಂಡ್ಕೂರು ಬಸ್ಸು ನಿಲ್ದಾಣದಲ್ಲಿ ಒಬ್ಬ ವ್ಯಕ್ತಿ ಇದ್ದು ಆತನನ್ನು ವಿಚಾರಿಸಲಾಗಿ ಆತನು ಮೊದಲು ಸರಿಯಾದ ಹೆಸರು ಮತ್ತು ವಿಳಾಸ ತಿಳಿಸದೆ ಇದ್ದು ನಂತರದಲ್ಲಿ ಸಂಕ್ಷೀಪ್ತವಾಗಿ ವಿಚಾರಿಸಲಾಗಿ ಆತನ ಹೆಸರು ಉಮನಾಥ ಪ್ರಭು ಎಂಬುದಾಗಿ ತಿಳಿಸಿರುತ್ತಾರೆ. ಆರೋಪಿಯನ್ನು ನಮ್ಮ ಸ್ವಂತ ವಾಹನದಲ್ಲಿ ಕರೆದುಕೊಂಡು ಬಂದು ಬೆಳಿಗ್ಗೆ 8.00 ಗಂಟೆಗೆ ಠಾಣೆಯಲ್ಲಿ ಚಾಸಾ-19 ರವರ ಮುಂದೆ ಹಾಜರುಪಡಿಸಿ ಈ ಕುರಿತು ವರದಿ ನೀಡಿರುತ್ತೇನೆ.

3.ಸಾಕ್ಷಿಯು ಚಾಸಾ-19 ರವರಿಗೆ ನೀಡಿದ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ವರದಿಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀಮತಿ ಐ ಎಸ್ ಕೆ ವಕೀಲರಿಂದಃ**

4. ಆರೋಪಿಯನ್ನು ಬಂಧಿಸಲು ಹೊರಟ ಸಮಯದ ಬಗ್ಗೆ ಠಾಣಾ ಡೈರಿಯಲ್ಲಿ ನಮೂದಿಸಿರುತ್ತೇನೆ. ನಾನು ಮತ್ತು ಚಾಸಾ-13 ರವರು ಆರೋಪಿಯನ್ನು ಬಂಧಿಸಲು ಹೋಗಿರುತ್ತೇವೆ. ಆರೋಪಿಯನ್ನು ಗುರುತಿಸಲು ವಿಶೇಷ ಗುರುತು ಇದೆಯಾ ಎಂದರೆ ಸಾಕ್ಷಿಯು ಆರೋಪಿಯ ಮೇಲೆ ಹೆಬ್ರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಆರೋಪಿಯ ಭಾವಚಿತ್ರ ನಮ್ಮ ಬಳಿ ಇತ್ತು ಎಂದು ನುಡಿಯುತ್ತಾರೆ. ಆರೋಪಿಯನ್ನು ಸ್ವತಂತ್ರ ಸಾಕ್ಷಿದಾರರ ಸಮಕ್ಷಮ ದಸ್ತಗಿರಿ ಮಾಡಿರುವುದಿಲ್ಲ. ಆರೋಪಿಯನ್ನು ಬಂಧಿಸಿದ ಸಮಯದಲ್ಲಿ ಆತನು ಪಂಚೆ ಮತ್ತು ಅಂಗಿ ಧರಿಸಿದ್ದರು. ದಿಃ11.12.2016 ರಂದು ನಾನು ಆರೋಪಿಯನ್ನು ವಶಕ್ಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಅರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ